# ಕರ್ನಾಟಕ ಸರ್ಕಾರ

## ತಹಶೀಲ್ದಾರರು ಹೊಸಪೇಟೆ ಇವರ ನ್ಯಾಯಾಲಯದ ನಡವಳಿಗಳು

| ವಾದಿಗಳು | ಪ್ರತಿವಾದಿಗಳು |
|---|---|
| 1.ಟಿ.ಸೀತಾರಾಮ ತಾಯಿ ಹನುಮಂತಮ್ಮ<br>2.ತಾರಿಹಳ್ಳಿ ಸರೋಜ ಗಂಡ ಲೇಟ್ ತಾರಿಹಳ್ಳಿ ಸೀತಾರಾಮ | 1.ಟಿ.ಪರಶುರಾಮ ತಾಯಿ ಟಿ.ಲಿಂಗಮ್ಮ |

ವಿಷಯ:- ಹೊಸಪೇಟೆ ತಾಲೂಕಿನ ಹೊಸಪೇಟೆ ಹೋಬಳಿಯ ಅಮರಾವತಿ ಗ್ರಾಮದ

ಸ.ನಂ.513/C1/A ವಿ.2.50 ಎಕರೆ ಜಮೀನಿನ ತಕರಾರು ವಿಚಾರಣಾ ಕುರಿತು

ಪೀಠಿಕೆ

ಈ ಪ್ರಕರಣಕ್ಕೆ ಸಂಭಂಧಿಸಿದಂತೆ ಹೊಸಪೇಟೆ ತಾಲೂಕಿನ ಹೊಸಪೇಟೆ ಹೋಬಳಿಯ ಅಮರಾವತಿ ಗ್ರಾಮದ ಸ.ನಂ.513/C1/A ವಿ.2.50 ಎಕರೆ ಜಮೀನು ಪಟ್ಟಾ ಹೊಂದಿದ .ಟಿ.ಸೀತಾರಾಮ ತಾಯಿ ಹನುಮಂತಮ್ಮ ಇವರು ದಿನಾಂಕ 26-10-2015 ರಂದು ಮರಣ ಹೊಂದಿದ್ದರಿಂದ ಪೋತಿ ವಾರಸತ್ವ ಪ್ರಕಾರ ಈತನ ಹೆಂಡತಿಯಾದ ತಾರಿಹಳ್ಳಿ ಸರೋಜ ಗಂಡ ಲೇಟ್ ತಾರಿಹಳ್ಳಿ ಸೀತಾರಾಮ ಇವರ ಹೆಸರಿನಲ್ಲಿ ಪೋತಿವಾರಸತ್ವ ಪ್ರಕಾರ ಹಕ್ಕು ಬದಲಾವಣೆ ಮಾಡಲು ದಿನಾಂಕ 18-1-2016 ರಂದು ಅರ್ಜಿಯನ್ನು ಹಾಕಿಕೊಂಡಿರುತ್ತಾರೆ.ಇದರ ಪ್ರಕಾರ ಹಕ್ಕು ಬದಲಾವಣೆ ಪ್ರಕ್ರಿಯೆಯನ್ನು ಪ್ರಾರಂಭಿಸಲು ಸೂಕ್ತ ಕ್ರಮಕ್ಕಾಗಿ ದಾಖಲೆಗಳನ್ನು ಕಂದಾಯ ಪರೀವಿಕ್ಷಕರು ಹೊಸಪೇಟೆ ಇವರಿಗೆ ಕಳುಹಿಸಿರುತ್ತಾರೆ.ಸದರಿ ಪ್ರಕರಣದಲ್ಲಿ ಕಂದಾಯ ಪರೀವಿಕ್ಷಕರು ಹೊಸಪೇಟೆ ಇವರು ಹ.ಬ.ಸಂಖ್ಯೆ H-37/2015-16 ದಿನಾಂಕ 29-01-2016 ರಂದು ಆದೇಶ ಮಾಡಲು ಕೈಗೆತ್ತಿಕೊಂಡಾಗ ಸದರಿ ಸ.ನಂ.ಜಮೀನಿಗೆ ಸಂಬಂದಿಸಿದಂತೆ ಟಿ.ಪರಶುರಾಮ ತಾಯಿ ಟಿ.ಲಿಂಗಮ್ಮ ಹೊಸಪೇಟೆ ಇವರು ದಿನಾಂಕ 3-02-2016 ರಂದು ತಕರಾರು ಅರ್ಜಿ ಸಲ್ಲಿಸಿದ್ದರಿಂದ ಸದರಿ ಪ್ರಕರಣವು ತಕರಾರು ಪ್ರಕರಣ ಎಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ತಹಶೀಲ್ದಾರರು ಹೊಸಪೇಟೆ ಇವರ ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ.

ಸದರಿ ಪ್ರಕರಣದಲ್ಲಿ ವಾದಿ ಮತ್ತು ಪ್ರತಿವಾದಿಗಳಿಗೆ ನೋಟಿಸುಗಳನ್ನು ಜಾರಿಗೊಳಿಸಿ ಪ್ರಕರಣದಲ್ಲಿ ವಿಚಾರಣೆಯನ್ನು ದಿನಾಂಕ 02-06-2016 ರಂದು ಪ್ರಾರಂಭಿಸಿ ದಿನಾಂಕ 9-6-2016 ಕ್ಕೆ ಅಂತಿಮಗೊಳಿಸಲಾಯಿತು

ಪ್ರಕರಣದಲ್ಲಿ ವಿಚಾರಣೆಗೆ ಕರೆ ಮಾಡಲಾಗಿ ವಾದಿ ಮತ್ತು ಪ್ರತಿವಾದಿಗಳು ಕರೆಯಲಾಗಿ ವಾದಿ ಮತ್ತು ಪ್ರತಿವಾದಿಗಳು ವಿಚಾರಣೆಗೆ ಹಾಜರಿದ್ದು ವಿಚಾರಣೆಯಲ್ಲಿ .ಟಿ.ಪರಶುರಾಮ ತಾಯಿ ಟಿ.ಲಿಂಗಮ್ಮ ಹೊಸಪೇಟೆ ಇವರು ದಿನಾಂಕ 3-2-2016 ರಂದು ನೀಡಿದ ತಕರಾರು ಅರ್ಜಿಯನ್ನು ವಾಪಾಸು ಪಡೆಯುತ್ತೇನೆ ಎಂದು ತಿಳಿಸಿರುತ್ತಾರೆ.ಈ ಪ್ರಕರಣದಲ್ಲಿ ಯಾವುದೇ ತಕರಾರುಗಳು ಇಲ್ಲವಾದ್ದರಿಂದ ಈ ಕೆಳಗಿನಂತೆ ಆದೇಶ

ನಂ.ಕಂ.ಪಹಣಿ/ತಕರಾರು/16/2016-17

ದಿನಾಂಕ:-21-6-2016

# ಆದೇಶ

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳಿಂದಾಗಿ ಹಾಗೂ ವಾಸ್ತವಂಶದ ಹಿನ್ನಲೆಯಿಂದಾಗಿ ಹೊಸಪೇಟೆ ತಾಲೂಕಿನ ಹೊಸಪೇಟೆ ಹೋಬಳಿಯ ಅಮರಾವತಿ ಗ್ರಾಮದ ಸ.ನಂ.513/C1/A ವಿ.2.50 ಎಕರೆ ಜಮೀನು ಪೌತಿವಾರಸತ್ವ ಪ್ರಕಾರ ತಾರಿಹಳ್ಳಿ ಸರೋಜ ಗಂಡ ಲೇಟ್ ತಾರಿಹಳ್ಳಿ ಸೀತಾರಾಮ ಹೊಸಪೇಟೆ ಇವರ ಹೆಸರಿನಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ

ಈ ಆದೇಶವನ್ನು ದಿನಾಂಕ 30-6-2016 ರಂದು ಉಕ್ತ ಲೇಖನ ನೀಡಿ ತೆರೆದ ನ್ಯಾಯಾಲಯದಲ್ಲಿಬಹಿರಂಗವಾಗಿ ಘೋಷಿಸಲಾಯಿತು

ತಹಶೀಲ್ದಾರರು,ಹೊಸಪೇಟೆ.

ಗೆ,

ವಾದಿ ಮತ್ತು ಪ್ರತಿವಾದಿಗಳಿಗೆ

ಪ್ರತಿ ಕಂ.ಪ.ಹೊಸಪೇಟೆ

ಭೂಮಿ ಕೇಂದ್ರ ತಾಲೂಕು ಕಛೇರಿ ಹೊಸಪೇಟೆ